	ತಾಲ್ಲೂಕು	ರೂ.ಗಳಲ್ಲಿ
4.	ಆಂಜನೇಯ ಯುವಕ ಸಂಘ, ಗಂಗಮತಬೀದಿ, ಆರಕಲಗೂಡು	5,000.00
5.	ಶಿವಣ್ಣ ಮತ್ತು ಸಂಗಡಿಗರು, ದೊಡ್ಡಮಗ್ಗೆ	5,000.00
	ಸಕಲೇಶಪುರ ತಾಲ್ಲೂಕು	
1.	ತಾರುಣ್ಯ ಮಹಿಳಾ ಸಮಾಜ, ಕುಶಾಲನಗರ ಬದಾವಣೆ, ಸಕಲೇಶಪುರ.	5,000.00
2.	ಶಾಂತಲ ಮಹಿಳಾ ಸಮಾಜ, ಕುಶಾಲನಗರ ಬಡಾವಣೆ, ಸಕಲೇಪುರ	5,000.00
3.	ಜೈ ಕರ್ನಾಟಕ ಸಂಘ, ಬೆಳ್ಳಿಕೆರೆ	5,000.00
4.	ಟಿಪ್ಪು ಯುವಕ ಸಂಘ, ಆಜಾದ್ ರಸ್ತೆ, ಸಕಲೇಶಪುರ	5,000.00
	ಬೇಲೂರು ತಾಲ್ಲೂಕು	
1.	ಶ್ರೀ ಮಾರುತ ಯುವಜನ ಸಂಘ, ಹೊಳಬೀದಿ, ಬೇಲೂರು	5,000.00
2.	ಧರಣಿ ಯುವಕ ಮಂಡಳಿ, ತಾ: ಪಂಚಾಯ್ತಿ ಕಚೇರಿ ಹತ್ತಿರ	5,000.00
3.	ಆದರ್ಶ ಯುವಕ ಸಂಘ, ಹನುಮಿಡಿ, ಬೇಲೂರು ತಾ:	5,000.00
4.	ಸೌಮ್ಯ ಶ್ರೀ ಗಮಕ ಕಲಾಶಾಲೆ, ಕೋಟೆ, ಬೇಲೂರು	5,000.00
	ಆಲೂರು ತಾಲ್ಲೂಕು	
1.	ಎಸ್. ನಾಗರಾಜು ಮತ್ತು ತಂಡದವರು, ಕಾರ್ಜುವಳ್ಳಿ, ಆಲೂರು ತಾ:	5,000.00
2.	ಚೇತನ ಬಳಾ, ಆಲೂರು	5,000.00
3.	ಹರ್ಷಿತ ಮಹಿಳಾ ಸಮಾಜ, ಆಲೂರು	5,000.00

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ಕಾರಿ ಹಣ ದುರುಪಯೋಗವಾಗಿರುವ ಬಗ್ಗೆ ಇಲಾಖಾ ವಿಚಾರಣೆ

190(1546) ಶ್ರೀ ಚನ್ನಿಪಪ್ಪ. ಸಿ. (ಕೊರಟಗೆರೆ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 1989 ರಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಸರ್ಕಾರಿ ಹಣ ದುರುಪಯೋಗವಾಗಿರುವ ಮೊತ್ತವೆಷ್ಟು; ಇದರಲ್ಲಿ ಯಾರು ಯಾರು ಭಾಗಿಗಳಾಗಿದ್ದಾರೆ; ಇವರುಗಳ ಮೇಲೆ ಸರ್ಕಾರವು ಇದುವರೆವಿಗೂ ಕ್ರಮ ಕೈಗೊಳ್ಳದೇ ಇರುವುದು ನಿಜವಲ್ಲವೆ: (ವಿವರ ನೀಡುವುದು)

ಆ. ಹಣ ದುರುಪಯೋಗ ಮಾಡಿದ ಸಿಬ್ಬಂದಿ ಮತ್ತು ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು;

ಇ. ಇದೂವರೆವಿಗೂ ಸಿಬ್ಬಂದಿ ಮತ್ತು ಅಧಿಕಾರಿಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳದೇ ಇರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ, ಇನ್ನು ಮುಂದೆ ಇಂತಹ ಸರ್ಕಾರಿ ಹಣ ದುರುಪಯೋಗವಾಗದಂತೆ ಸೂಕ್ತ ಕ್ರಮ ಕೈಗೊಳ್ಳುವುದು ಯಾವಾಗ:

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು)

ಅ. 1989ನೇ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮಲೇರಿಯಾ ಸರ್ವಲೆನ್ಸ್ ನೌಕರರುಗಳಿಗೆ ವೇತನ ನಿಗಧಿ ಪಡಿಸುವಲ್ಲಿ ತಪ್ಪಾಗಿರುವುದರ ಕಾರಣ, ವ್ಯತ್ಯಾಸದ ಹಣ ರೂ. 9,29,958.60 ಗಳಾಗಿರುತ್ತದೆ. ಇದಕ್ಕೆ ಇಬ್ಬರು ಅಧಿಕಾರಿಗಳು, 10 ಜನ ಸಿಬ್ಬಂದಿಯವರು ಕಾರಣರಾಗಿರುತ್ತಾರೆ. ಸದರಿಯವರುಗಳ ವಿರುದ್ಧ ಕೆ.ಸಿ.ಎಸ್.ಆರ್ ನಿಯಮ 214 ರನ್ವಯ ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ. ಹಾಗೇಯೇ ಮೇಲಿನ ವ್ಯತ್ಯಾಸದ ಹಣವನ್ನು ಪಡೆದಿರುವ ನೌಕರರುಗಳಿಂದ ಹಣ ವಸೂಲಿ ಮಾಡಲಾಗಿದೆ ಹಾಗೂ ಕೆಲವು ಪ್ರಕರಣಗಳಲ್ಲಿ ಮೇಲ್ಕಂಡ ನೌಕರರು ಕೆ.ಎ.ಟಿ. ಉಚ್ಚ ನ್ಯಾಯಾಲಯ ಇಲ್ಲಿ ಅರ್ಜಿ ಸಲ್ಲಿಸಿ, ತಡೆಯಾಜ್ಞೆ ಪಡೆದಿರುತ್ತಾರೆ. ಇನ್ನೂ ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯವು ಅರ್ಜಿದಾರರ ಪರವಾಗಿ ತೀರ್ಪು ನೀಡಿ, ವ್ಯತ್ಯಾಸದ ಹಣವನ್ನು ವಸೂಲಿ ಮಾಡಬಾರದೆಂದು ಆದೇಶ ನೀಡಿರುತ್ತಾರೆ. ಸದರಿ ಆದೇಶದ ವಿರುದ್ಧ ಪುನರ್ ಪರಿಶೀಲನಾ ಅರ್ಜಿಯನ್ನು ಇಲಾಖೆಯು ದಾಖಲೆ ಮಾಡಿರುತ್ತದೆ.

ಆ. ಮೇಲಿನ ಪ್ರಶ್ನೆ (ಅ)ರಲ್ಲಿ ಉತ್ತರಿಸಿರುವಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಇ. ಮೇಲಿನಂತೆ ಕ್ರಮ ಜರುಗಿಸಲಾಗುತ್ತಿದೆ.

ಕೋಲಾರ ತಾಲ್ಲೂಕ ರಸ್ತೆ ಕಾಮಗಾರಿಗೆ ಭೂಸ್ವಾಧೀನ

191(1513) ಶ್ರೀ ಶ್ರೀನಿವಾಸ ಗೌಡ ಕುದುವನಹಳ್ಳಿ ಕೆ. (ಕೋಲಾರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೋಲಾರ ತಾಲ್ಲೂಕಿನಲ್ಲಿ ಇಲ್ಲಿಯವರೆವಿಗೆ ರಸ್ತೆ ಕಾಮಗಾರಿಗೆ ಎಷ್ಟು ಜಮೀನನ್ನು ಭೂಸ್ವಾಧೀನಗೊಳಿಸಲಾಗಿದೆ;

2. ಭೂಸ್ವಾಧೀನಗೊಳಿಸಿದ್ದರಿಂದ ಸಂಬಂಧಪಟ್ಟ ರೈತರಿಗೆ ನೀಡಿರುವ ಪರಿಹಾರ ಧನ ಎಷ್ಟು; ನೀಡಬೇಕಾಗಿದ್ದೆಷ್ಟು; (ಮಾಹಿತಿ ನೀಡುವುದು)

3. ಹೋಳೂರು ಬೈಪಾಸ್ ರಸ್ತೆ ಕಾಮಗಾರಿಯಿಂದ ರೈತರಿಗೆ ಇಲ್ಲಿಯವರೆವಿಗೆ ಎಷ್ಟು ಪರಿಹಾರ ಧನ ನೀಡಲಾಗಿದೆ; ಬಾಕಿ ಉಳಿದ ಪರಿಹಾರ ಧನ ಎಷ್ಟು ಮತ್ತು ಯಾವಾಗ ಸಂದಾಯ ಮಾಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1. 25 ಎಕರೆ 03 ಗುಂಟೆ ಜಮೀನನ್ನು ಭೂಸ್ವಾಧೀನಗೊಳಿಸಲಾಗಿದೆ.

2. ರೂ.46.74 ಲಕ್ಷಗಳನ್ನು ಪಾವತಿಸಬೇಕಾಗಿದ್ದು ಈವರೆಗೆ ರೂ. 26.13 ಲಕ್ಷಗಳನ್ನು ಪಾವತಿ ಮಾಡಲಾಗಿದ್ದು, ಭೂಪರಿಹಾರಕ್ಕಾಗಿ ಇನ್ನೂ ರೂ. 20.61 ಲಕ್ಷಗಳು ಪಾವತಿಸಬೇಕಾಗಿರುತ್ತದೆ.

3. ಹೋಳೂರು ಬೈಪಾಸ್‌ಗಾಗಿ 1 ಎಕರೆ 29.50 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ರೂ. 13.63 ಲಕ್ಷಗಳ ಭೂ ಪರಿಹಾರವನ್ನು ನಿರ್ಧರಿಸಿದ್ದು, ಈ